ಮಾಡಿದ್ದಳು. ಅದರಲ್ಲೇ ತನ್ನನ್ನೂ ಓದಿಸಿದ್ದಳು. ಆಕೆಯ ನಿರೀಕ್ಷೆಯನ್ನು ಹುಸಿ ಮಾಡದಂತೆ ತಾನೂ ಓದಿ ಸಿಕ್ಕ ಯಾವುದೋ ಮೆರಿಟ್ ಸ್ಕಾಲರ್‌ಶಿಪ್‌ನಲ್ಲಿ ವಿದೇಶದಲ್ಲಿ ಮೆಡಿಕಲ್ ಓದುವ ಅವಕಾಶ ಗಿಟ್ಟಿಸಿಕೊಂಡು ಆಕೆಯ ಬಡ ಜೀವವನ್ನು ಖುಷಿಪಡಿಸಿದ್ದುದೆಲ್ಲ ಬೇಡವೆಂದರೂ ನೆನಪಾಗುತ್ತಿತ್ತು..

ಅವನ ಕಣ್ಣಾಲಿಗಳು ತೇವಗೊಂಡವು. ಕುತ್ತಿಗೆಯ ನರ ಉಬ್ಬಿ ಗದ್ಗದಿತನಾದ. ಯಾರಾದರೂ ನೋಡಿಯಾರೆಂದು ಕಿಟಕಿಯತ್ತ ಮುಖ ಮಾಡಿದ. ಇಲ್ಲಿ ಎಲ್ಲಾದರೂ ಅವ್ವನ ಪ್ರಾಣಪಕ್ಷಿ ರೆಕ್ಕೆಕಟ್ಟಿಕೊಂಡು ಇನ್ನೂ ಮೇಲೆ ಮೇಲಕ್ಕೆ ಹಾರಿಹೋಗುತ್ತಿರಬಹುದೇ ಎಂದು ನಿರುಕಿಸಿದ. ಇದು ಯಾವ ದೇಶದ ವಾಯುಪ್ರದೇಶವೋ ಗೊತ್ತಿಲ್ಲ, ಇಲ್ಲಿಗೇಕೆ ಅವ್ವನ ಪ್ರಾಣ ಹಾರಿ ಬರುತ್ತದೆ ಎಂದು ತನಗೆ ತಾನೇ ಸಮಾಧಾನಿಸಿಕೊಂಡ. ಆದರೂ, ಈ ಪ್ರದೇಶದಲ್ಲಿ ಸತ್ತ ಮನುಷ್ಯರ, ಪ್ರಾಣಿ–ಪಕ್ಷಿಗಳ ಪ್ರಾಣಪಕ್ಷಿಗಳಾದರೂ ಹಾರಿಹೋಗುತ್ತಿರುವುದು ಕಾಣಬೇಕಿತ್ತಲ್ಲವೇ ಎಂಬ ತರ್ಕಕ್ಕೆ ಒಳಗಾದ.

★ ★ ★

ಅವ್ವ ಎಂಥ ಹಟಮಾರಿ ಎಂದರೆ ಸಾಯಲು ಯಾರೂ ಒಳಗೆ ಸುಲಭವಾಗಿ ಒಳಬರಲಾಗದಂಥ ಒತ್ತೊತ್ತಾದ ಬಿದಿರುಮೆಳೆಯನ್ನು ಆಯ್ದುಕೊಂಡಿದ್ದಳು. ಉಸಿರು ಬಿಟ್ಟರೆ ಯಾರಿಗೆ ವಾಸನೆ ಬಡಿದೀತೋ, ಬಾಯಿ ಬಿಟ್ಟು ಕಿರುಚಿದರೆ ಯಾರಿಗಾದರೂ ಎಲ್ಲಿ ಕೇಳಿಸಿ ಬಂದು ಉಳಿಸಿಬಿಟ್ಟಾರೋ ಎಂದು ಹಲ್ಲುಮಡಿ ಕಚ್ಚಿಕೊಂಡು ನೋವನ್ನು ನುಂಗುತ್ತಿದ್ದಳು. ಕಾರ್ಕೋಟಕ ವಿಷ ಹೊಟ್ಟೆಯೊಳಗಿನ ಕರುಳನ್ನೆಲ್ಲ ಕರಕರ ಸುಟ್ಟು, ರಕ್ತದ ಕಣಕಣದಲ್ಲೂ ಸೇರಿಹೋದಾಗ ಆಗುವ ಅನೂಹ್ಯ ನೋವಿನಲ್ಲಿ ಒದ್ದಾಡುತ್ತಿದ್ದರೂ, ಸದ್ದಾಗದಂತೆ ಸತ್ತುಬಿಡಬೇಕು ಎಂದು ಪಣತೊಟ್ಟಿದ್ದಳು. ಒಂದು ಜೀವವನ್ನು ಹುಟ್ಟಿಸುವುದು ಎಷ್ಟು ಕಷ್ಟವೋ, ಸಾಯಿಸುವುದೂ ಅಷ್ಟೇ ಕಷ್ಟ. ಉಸಿರನ್ನು ಕೇವಲ ಒಂದೇ ಒಂದು ನಿಮಿಷ ನಿಲ್ಲಿಸಿಬಿಟ್ಟರೆ ಸಾಕು, ಸಾಯಿಸಿಬಿಡಬಹುದು. ಆದರೆ ಬೇಕೆಂದಾಗ ಆ ಪ್ರಾಣ ಸದೃಶವಾದ ಉಸಿರನ್ನು ನಿಲ್ಲಿಸುವುದಾಗಲೀ, ಇಲ್ಲವೇ ನಿಲ್ಲುತ್ತಿರುವ ಉಸಿರನ್ನು ಉಳಿಸಿಕೊಳ್ಳುವುದಾಗಲೀ ಎಂಥ ಅಸಾಧ್ಯದ ಪ್ರಕ್ರಿಯೆ ಅಲ್ಲವೇ?

ಯಾರೋ ದನ ಕಾಯುವ ಹುಡುಗ ನೋಡಿ ಓಡಿಹೋಗಿ ನರಸಯ್ಯನಿಗೆ ಹೇಳುವ ವೇಳೆಗಾಗಲೇ ಇಡೀ ಬಾಟಲಿಯಲ್ಲಿದ್ದ ವಿಷವನ್ನು ಅವ್ವ ಕುಡಿದುಬಿಟ್ಟಿದ್ದಳು. ಬಹುಶಃ ಗಟ್ಟಿ ಮನಸ್ಸು ಮಾಡಿ ಒಂದೇ ಗುಟುಕಿಗೆ ಕುಡಿದಿರಬೇಕು. ಇಲ್ಲವಾದರೆ ಸಾಯದೇ ಬದುಕಿಬಿಟ್ಟರೆ ಎಂಬ ಆತಂಕವಿರಬೇಕು. ಹಿಂದೆ ಒಮ್ಮೆ ಹೀಗೇ ಅರೆಜೀವವಾಗಿ ಆಸ್ಪತ್ರೆಯಲ್ಲಿ ಅನುಭವಿಸಿದ್ದ ನೋವು ಆಕೆಗೆ ಚೆನ್ನಾಗಿ ನೆನಪಿತ್ತು. ಆ ದಬ್ಬಣ ಗಾತ್ರದ ಸೂಜಿಗಳ ಚುಚ್ಚುವಿಕೆಗಿಂತ ವಿಷ ಕುಡಿದು ಸಾಯುವುದೇ ಸುಖ ಎಂದು ಅನ್ನಿಸಿರಬೇಕು. 'ವಯಸ್ಸಾದ ಮೇಲೆ ಇರಬಾರದು ಕಣೇ, ನನ್ನ ಗಂಡನ ಜತೆ ನಾನೂ ಹೋಗಿಬಿಟ್ಟಿದ್ದರೆ ಚೆನ್ನಾಗಿತ್ತು. ಪಾಪಿ ಮುಂಡೇಮಗ ನನ್ನೊಬ್ಬಳನ್ನೇ ಪರದೇಶಿ ಮಾಡಿ ಬಿಟ್ಟುಹೋಗಿ ಸುಖವಾಗಿದ್ದಾನೆ' ಎಂದು ಸತ್ತುಹೋಗಿದ್ದ ಗಂಡನ ನೆನೆದು ನಿನ್ನೆ ಇಡೀ ರಾತ್ರಿ ವಾರಗಿತ್ತಿಯ ಬಳಿ ಆಲಾಪಿಸುತ್ತ ಕಣ್ಣೀರು ಸುರಿಸಿದ್ದಳು. ಆದರೂ, ತನ್ನ ಹೆಂಡತಿಯದೇ ತಪ್ಪು ಎಂದು ಮನವರಿಕೆಯಾಗಿ ಮಗ ಈಗ ಬಂದು ಕರೆದುಕೊಂಡು ಹೋಗಬಹುದು, ಆಗ ಬಂದು ಕರೆದುಕೊಂಡು ಹೋಗಬಹುದು ಎಂದು ಪದೇಪದೆ ಇಣುಕಿಣುಕಿ ನೋಡುತ್ತ ಕಾದೇ ಕಾದಳು. ಆದರೆ ಆ ಮಗ ಬರಲೇ ಇಲ್ಲ... ಇನ್ನೊಬ್ಬ ಮಗ ಎಲ್ಲೋ ದೂರದಲ್ಲಿದ್ದಾನೆ, 'ಅಲ್ಲೇ ಸುಖವಾಗಿರು ಮಗಾ...' ಎಂದು ಅಲ್ಲಿಂದಲೇ ನಿರಂಜನನಿಗೆ ಹಾರೈಸಿದ್ದಳು.

ಅಷ್ಟರಲ್ಲಿ ಅದೆಲ್ಲಿದ್ದನೋ ನರಸಯ್ಯ, ಮತ್ತವನ ಹೆಂಡತಿ ಸುವರ್ಣ ದೌಡಾಯಿಸಿ ಬಂದು ಬಿದಿರುಮೆಳೆಯ ಮುಳ್ಳನ್ನೂ ಲೆಕ್ಕಿಸದೇ ನುಗ್ಗಿ ಹೊರಗೆ ಎತ್ತಿಕೊಂಡು ಬರಲು ಪ್ರಯತ್ನ ಪಟ್ಟರು. ಆದರೆ ತನ್ನನ್ನು 'ಮುಟ್ಟಬೇಡಿ... ಪಾಪಿಗಳಾ...' ಎಂದು ಕೈಯನ್ನು ಅಡ್ಡತಂದು ತಡೆದಳು. ಕೈಕಾಲುಗಳನ್ನು ಹಿಡಿದೆತ್ತಿಕೊಳ್ಳಲು ಹೋದಾಗ ಕೊಸರಿಕೊಂಡು ಒದರಾಡಿದಳು. ಆದರೂ ಕೇಳದಾದಾಗ ಕ್ಯಾಕರಿಸಿ